# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(5)ಪಿ.ಆರ್/49/24-25

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ:31.7.24

## ಕಛೇರಿ ಆದೇಶ

ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಫ್-'ಡಿ' ವೃಂದದ ಸಿಬ್ಬಂದಿಗಳ ಸಾಮಾನ್ಯ ವರ್ಗಾವಣೆ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ: ನಅಇ 63 ಎಂ.ಎನ್.ಯು 2023, ದಿ: 04-07-2024
2) ಸಂಖ್ಯೆ: ಬಿ12(5)ಪಿ.ಆರ್/112/24-25, ದಿನಾಂಕ: 20-07-2024ರ ಆಂತರಿಕ ಕಛೇರಿ ಟಿಪ್ಪಣಿ
3) ಮಾನ್ಯ ಮುಖ್ಯ ಆಯುಕ್ತರು ರವರ ಸಂಖ್ಯೆ: ಬಿ12(5)ಪಿ.ಆರ್/112/24-25 ರಲ್ಲಿ ದಿನಾಂಕ: 22-07-2024ರಂದು ಹೊರಡಿಸಿರುವ ಮಾರ್ಗಸೂಚಿಗಳು
4) ವಲಯ ಆಯುಕ್ತರು (ದಕ್ಷಿಣ) ರವರ ವರದಿ ದಿನಾಂಕ: 29-07-2024.

-----------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ-(1)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದನುಸಾರ ದಕ್ಷಿಣ ವಲಯ ವ್ಯಾಪ್ತಿಯ ಕಛೇರಿಗಳಲ್ಲಿ 07 ವರ್ಷಗಳಿಗೂ ಮಿಗಿಲಾಗಿ ಕಾರ್ಯನಿರ್ವಹಿಸಿರುವ ಗ್ರೂಫ್-'ಡಿ' ವೃಂದದ ಈ ಕೆಳಕಂಡ ಕಾರ್ಯಕಾರಿ ಸಿಬ್ಬಂದಿಗಳನ್ನು ಅಂತರ ವಲಯದಲ್ಲಿ ವಿಭಾಗದಿಂದ ವಿಭಾಗಕ್ಕೆ ವರ್ಗಾವಣೆ ಮಾಡುವ ಸಂಬಂಧ ವಲಯ ಮಟ್ಟದಲ್ಲಿ ಕೌನ್ಸಿಲಿಂಗ್ ನಡೆಸಿ, ಆಯ್ಕೆ ಪಟ್ಟಿಯನ್ನು ಉಲ್ಲೇಖ-(4)ರಂತೆ ವಲಯ ಆಯುಕ್ತರು / ಜಂಟಿ ಆಯುಕ್ತರು ದೃಢೀಕರಿಸಿ ಕೇಂದ್ರ ಕಛೇರಿಯ ಆಡಳಿತ ಶಾಖೆಗೆ ಕಳುಹಿಸಿರುವಂತೆ ಈ ಕೆಳಕಂಡ ನೌಕರರುಗಳನ್ನು ಅವರ ಹೆಸರಿನ ಮುಂದೆ ನಮೂದಿಸಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲು ವರ್ಗಾಯಿಸಿ ಆದೇಶಿಸಿದೆ.

| ಕ್ರ. ಸಂ | ಹೆಸರು | ಹುದ್ದೆ | ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ | ಕೌನ್ಸಿಲಿಂಗ್ ಮುಖಾಂತರ ಆಯ್ಕೆ ಮಾಡಿಕೊಂಡಿರುವಂತೆ ವರ್ಗಾಯಿಸಿ ನೇಮಿಸಿರುವ ಸ್ಥಳ |
|---|---|---|---|---|
| 1. | ಶ್ರೀ ಗಂಗಯ್ಯ | ನಾಲ್ಕನೇ ದರ್ಜೆ ನೌಕರರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಾಳಿ ಆಂಜನೇಯ ದೇವಸ್ಥಾನ) | ಸಹಾಯಕ ಕಂದಾಯ ಅಧಿಕಾರಿ (ಬಸವನಗುಡಿ) |
| 2. | ಶ್ರೀ ಶಿವಲಿಂಗಯ್ಯ | ನಾಲ್ಕನೇ ದರ್ಜೆ ನೌಕರರು | ಕಾರ್ಯಪಾಲಕ ಅಭಿಯಂತರರು (ವಿಜಯನಗರ) | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ-ಚಿಕ್ಕಪೇಟೆ) |
| 3. | ಶ್ರೀ ತ್ಯಾಗರಾಜ.ಬಿ | ನಾಲ್ಕನೇ ದರ್ಜೆ ನೌಕರರು | ಸಹಾಯಕ ಕಂದಾಯ ಅಧಿಕಾರಿ (ಬಸವನಗುಡಿ) | ಕಾರ್ಯಪಾಲಕ ಅಭಿಯಂತರರು (ವಿಜಯನಗರ) |
| 4. | ಶ್ರೀಮತಿ ಮಂಜುಳ.ಆರ್ | ನಾಲ್ಕನೇ ದರ್ಜೆ ನೌಕರರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ-ಚಿಕ್ಕಪೇಟೆ) | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಗಾಳಿ ಆಂಜನೇಯ ದೇವಸ್ಥಾನ) |

ಮೇಲ್ಕಂಡ ಆದೇಶದನ್ವಯ ಸಂಬಂಧಪಟ್ಟ ಬಟವಾಡೆ ಅಧಿಕಾರಿಗಳು / ಇಲಾಖಾ ಮುಖ್ಯಸ್ಥರುಗಳು ವರ್ಗಾವಣೆಗೊಂಡ ನೌಕರರು ವರ್ಗಾಯಿಸಲಾಗಿರುವ ಸ್ಥಳದಲ್ಲಿ ಕಾರ್ಯನಿರ್ವಹಿಸಲು ಅನುವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವುದು.

ಮೇಲ್ಕಂಡ ಆದೇಶವು ಈ ಕೆಳಕಂಡ ಷರತ್ತಿಗೊಳಪಟ್ಟಿರುತ್ತದೆ.

**ಷರತ್ತುಗಳು:-**

1. ಸಾಮಾನ್ಯ ವರ್ಗಾವಣೆಗೊಂಡಿರುವ ನೌಕರರು ಬೇರೆ ಸ್ಥಳಕ್ಕೆ ವರ್ಗಾವಣೆ ಕೋರುವಂತಿಲ್ಲ ಹಾಗೂ ಈ ಆದೇಶವನ್ನು ಪಾಲಿಸದ ಸಂಬಂಧಪಟ್ಟ ನೌಕರರ ವಿರುದ್ಧ ನಿಯಮಾನುಸಾರ ಶಿಸ್ತು ಕ್ರಮ ಜರುಗಿಸಲಾಗುವುದು.
2. ವರ್ಗಾವಣೆ ಪ್ರಕ್ರಿಯೆ ಬಗ್ಗೆ ಯಾವುದಾದರೂ ಆಕ್ಷೇಪಣೆಗಳು / ದೂರುಗಳು ಸ್ವೀಕೃತಿಯಾದಲ್ಲಿ ಪರಿಶೀಲಿಸಿ ಕ್ರಮಕೈಗೊಳ್ಳುವ ಷರತ್ತಿಗೊಳಪಡಿಸಿದೆ.
3. ಸದರಿ ವರ್ಗಾವಣೆ ಆದೇಶದಲ್ಲಿ ವರ್ಗಾವಣೆಗೊಂಡಿರುವ ನೌಕರರುಗಳು ವರ್ಗಾವಣೆಗೊಂಡ ಸ್ಥಳಗಳಿಗೆ ವರದಿ ಮಾಡಿಕೊಳ್ಳುವ ಬಗ್ಗೆ ವಲಯ ಆಯುಕ್ತರು / ಜಂಟಿ ಆಯುಕ್ತರುಗಳು / ಇಲಾಖಾ ಮುಖ್ಯಸ್ಥರುಗಳು ಅಗತ್ಯ ಕ್ರಮ ಕೈಗೊಳ್ಳುವುದು.

31.7.24

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

ವಿಶೇಷ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

31/7

ಪ್ರತಿಯನ್ನು: ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತಶಾಖೆಗೆ ಕಳುಹಿಸಿದೆ.
: ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ
: ವಲಯ ಆಯುಕ್ತರು (ದಕ್ಷಿಣ) ವಲಯರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ವಲಯ ಜಂಟಿ ಆಯುಕ್ತರು (ದಕ್ಷಿಣ) ವಲಯ ರವರಿಗೆ ಕಳುಹಿಸಿದೆ.
: ಸಂಬಂಧ ಪಟ್ಟ ಇಲಾಖಾ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧ ಪಟ್ಟ ಬಟವಾಡೆ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
: ಸಂಬಂಧಪಟ್ಟ ನೌಕರರಿಗೆ / ಕಛೇರಿ ಪ್ರತಿ.